ವಜ್ರಗಿರಿಯ ರಾಜ ಶೂರಸೇನನಿಗೆ ತುಂಬಾ ಒಳ್ಳೆಯ ಹೆಸರಿತ್ತು, ಪ್ರಜೆಗಳನ್ನು ಅವನು ಸ್ವಂತ ಮಕ್ಕಳಂತೆ ಕಾಣುತ್ತಿದ್ದ. ಅವನ ರಾಜ್ಯ ಯಾವಾಗಲೂ ಸುಭಿಕ್ಷವಾಗಿತ್ತು. ಆದರೆ ಅವನಿಗೆ ಮಕ್ಕಳಿರಲಿಲ್ಲ. ಅವನಿಗೆ ವಿಶ್ವಜಿತ ಎಂಬ ಚಾಣಾಕ್ಷ ಮಂತ್ರಿಯಿದ್ದ. ರಾಜನ ಸಕಲ ಕೆಲಸಗಳನ್ನು ಅವನು ಅಚ್ಚುಕಟ್ಟಾಗಿ ಮಾಡುತ್ತಿದ್ದ. ರಾಜನಿಗೆ ಅವನಲ್ಲಿ ತುಂಬಾ ನಂಬಿಕೆ.

ರಾಜ ತನಗೆ ವಯಸ್ಸಾಗುತ್ತಿದೆ ಎಂದು ಚಿಂತಿಸಿ ಮುಂದಿನ ರಾಜನನ್ನಾಗಿ ಮಾಡಲು ತನ್ನ ಕುಟುಂಬವರ್ಗದಲ್ಲಿ ಯಾರಾದರೊಬ್ಬರನ್ನು ದತ್ತು ಪಡೆಯಲು ನಿರ್ಧರಿಸಿದ. ಇದು ಮಂತ್ರಿಗೆ ಗೊತ್ತಾದಾಗ ಅವನೊಳಗೆ ದುರಾಸೆ ಹುಟ್ಟಿತು. ಈ ದೇಶದ ರಾಜ ನಾನೇ ಯಾಕಾಗಬಾರದು, ಹೇಗೂ ಜನ ರಾಜನಿಗೆ ಕೊಡುವಷ್ಟೇ ಗೌರವ, ಮರ್ಯಾದೆ ನನಗೂ ಕೊಡುತ್ತಿದ್ದಾರೆ. ಆದರೆ ರಾಜ ಇದಕ್ಕೊಪ್ಪುವುದಿಲ್ಲ. ಹೇಗಾದರೂ ಮಾಡಿ ರಾಜನನ್ನು ಕೊಂದುಬಿಟ್ಟರೆ ಮುಂದಿನ ರಾಜ ನಾನೇ ಆಗಬಹುದು ಎಂದು ಲೆಕ್ಕಾಚಾರ ಹಾಕಿದ.

ಒಂದುದಿನ ರಾಜನಿಗೆ ಜ್ವರ ಬಂತು. ರಾಜವೈದ್ಯರನ್ನು ಕರೆದು ಪರೀಕ್ಷಿಸಿದಾಗ ಅವರು ಕೆಲವು ಔಷಧಗಳನ್ನು ಮಂತ್ರಿಯ ಕೈಗೆ ಕೊಟ್ಟು ಅದನ್ನು ದಿನಕ್ಕೆ ಮೂರು ಬಾರಿ ನೀಡಲು ಹೇಳಿದರು. ಮಂತ್ರಿ ಈ ಸಮಯ ಸೂಕ್ತವಾಗಿದೆ ಎಂದು ಯೋಚಿಸಿ ಕೂಡಲೇ ಮನೆಗೆ ಹೋಗಿ ಮನೆಯಲ್ಲಿಟ್ಟಿದ್ದ ವಿಷದ ಗಿಡದ ಬೇರನ್ನು ತೇದು ರಸ ತೆಗೆಯುತ್ತಿದ್ದ. ಅದನ್ನು ಅವನ ಪುಟ್ಟ ಮಗ ನೋಡಿ ಏನೆಂದು ಕೇಳಿದ: 'ಇದು ಔಷಧಿ. ರಾಜರಿಗೆ ಜ್ವರ ಬಂದಿದೆ. ಅದನ್ನು ವಾಸಿಮಾಡಲು ಕೊಡಬೇಕಾಗಿದೆ...' ಎಂದು ಹೇಳಿದ. ಅಂತೆಯೇ ಮಂತ್ರಿ ಆ ವಿಷದ ರಸವನ್ನು ಜೇನುತುಪ್ಪದೊಡನೆ ಬೆರೆಸಿ ರಾಜನ ಬಳಿ ತಂದ.

'ಪ್ರಭು ಅರಮನೆ ವೈದ್ಯರು ತಮ್ಮ ರೋಗಕ್ಕೆ ಈ ಔಷಧ ನೀಡಿದ್ದಾರೆ.' ಎಂದು ಹೇಳಿ ಅದನ್ನು ಕುಡಿಸಿಬಿಟ್ಟ. ಅದೇ ರೀತಿ ದಿನಕ್ಕೆ ಮೂರು ಬಾರಿ ಕುಡಿಸಿದಾಗ ಅದು ರಾಜನನ್ನು ಬಲಹೀನನನ್ನಾಗಿ ಮಾಡಿತು. ಇನ್ನೊಂದು ವಾರ ಅದನ್ನು ಕೊಟ್ಟಲ್ಲಿ ರಾಜ ಸತ್ತು ಹೋಗಿಬಿಡುತ್ತಿದ್ದ; ಯಾರಿಗೂ ಅನುಮಾನ ಬರುತ್ತಿರಲಿಲ್ಲ.

ಕೆಲದಿನ ಕಳೆವಷ್ಟರಲ್ಲಿ ರಾಜ ತುಂಬಾ ಸೋತು ಹೋದ. ಹಾಸಿಗೆಗೆ ಅಂಟಿ ಮಲಗಿದ ಕಣ್ಣು ಬಿಡಲೇ ಇಲ್ಲ. ತಾನು ಸಾಯುವುದರೊಳಗೆ ಯಾರಾದರೊಬ್ಬರನ್ನು ರಾಜನ ಸ್ಥಾನದಲ್ಲಿ ಕೂರಿಸಬೇಕಾಗಿತ್ತು. ಎಲ್ಲಾ ಕೆಲಸಕಾರ್ಯಗಳು ನಿಂತುಹೋಗಬಾರದೆಂದು ತಾತ್ಕಾಲಿಕವಾಗಿ ಮಂತ್ರಿಯನ್ನೇ ಕೂರಿಸಲು ಚಿಂತಿಸಿದ. ಇದು ಮಂತ್ರಿಗೆ ಗೊತ್ತಾಗಿ ಒಳಗೊಳಗೆ ಖುಷಿಯಾದರೂ ತೋರ್ಪಡಿಸದೆ ತುಸು ಪ್ರತಿಭಟನೆ ತೋರಿ ಕೊನೆಗೆ ಒಪ್ಪಿಕೊಂಡಂತೆ ಮಾಡಿದ.

ಮರುದಿನವೇ ಮಂತ್ರಿಗೂ ಜ್ವರ ಬಂತು. ಸೀದಾ ಮನೆಗೆ ಬಂದವನೇ ಹೆಂಡತಿ ಬಳಿ, 'ತುಂಬಾ ಚಳಿಯಾಗುತ್ತಿದೆ. ಜ್ವರ ಬಂದಿದೆ... ಔಷಧ ಕೊಡು...' ಎಂದು ಹೇಳಿ ರೂಮಿಗೆ ಹೋಗಿ ಮಲಗಿಬಿಟ್ಟ. ಅಲ್ಲೇ ಇದ್ದ ಅವನ ಪುಟ್ಟ ಅಮಾಯಕ ಮಗನು ತಂದೆ ಅಂದು ರಾಜನಿಗೆ ತೇದು ಕೊಟ್ಟಿದ್ದ ಬೇರು ನೆನಪಿಗೆ ಬಂದು, ತಾನೇ ಒಳಹೋಗಿ ಆ ಬೇರನ್ನು ಹುಡುಕಿ ತೆಗೆದು ತೇದು ಜೇನುತುಪ್ಪದೊಡನೆ ಬೆರೆಸಿ ತಂದುಕೊಟ್ಟ. ಆದರೆ ಅವನಿಗೆ ಅಳತೆ ಗೊತ್ತಾಗದೆ ಒಂದು ಲೋಟದ ತುಂಬಾ ತಂದುಕೊಟ್ಟುಬಿಟ್ಟ.

ಜ್ವರದ ತಾಪದಲ್ಲಿದ್ದ ಮಂತ್ರಿ ಅದನ್ನು ಹೆಂಡತಿ ಕೊಟ್ಟ ಔಷಧವೆಂದು ತಿಳಿದು ಅಷ್ಟನ್ನೂ ಕುಡಿದು ಮಲಗಿಬಿಟ್ಟ. ಅದೇ ರೀತಿ ರಾತ್ರಿಯೂ ಕುಡಿದಾಗ ಮರುದಿನ ಬೆಳಗಾಗುವುದರಲ್ಲಿ ಅವನು ಸತ್ತು ಹೋಗಿದ್ದ. ಇತ್ತ ರಾಜನಿಗೆ ರಾಜವೈದ್ಯರು ಮತ್ತೆ ಬೇರೆ ಔಷಧಿ ಕೊಟ್ಟು ವಾಸಿಮಾಡಿದರು. ಕ್ರಮೇಣ ರಾಜ ಚೇತರಿಸಿಕೊಂಡು ಮೊದಲಿನಂತೆ ಆರೋಗ್ಯವಂತನಾದ. ಎಂದಿನಂತೆ ರಾಜಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡ.